ಮದ್ದು ಎಂದು ತಿಳಿದ ಘನ ಮಹಿಳೆಯರ ಚಿತ್ರಗಳು ಇಲ್ಲಿವೆ. ನಾಗರತ್ನಮ್ಮ, ಚಿಂದೋಡಿ ಲೀಲಾ, ಮಾಲತಿಶ್ರೀಯವರ ಜೀವನ ಚಿತ್ರಗಳನ್ನು ನೆನಪಿಸಿಕೊಳ್ಳಬಹುದು. ಕುತೂಹಲಕ್ಕೆಂದು ಹೇಳುತ್ತೇನೆ, ಬಾಲ ಸರಸ್ವತಿಯಂತಹವರಿಗೆ ಸಿಕ್ಕ ಬೆಂಬಲದ ಒಂದು ಅಂಶ ಸಿಕ್ಕಿದ್ದರೂ ಇವರ ಬದುಕಿನ ಚಿತ್ರವೂ ಬೇರೆಯೇ ಆಗಿರುತ್ತಿತ್ತಲ್ಲವೆ? ಐದಾರು ದಶಕಗಳ ಹಿಂದೆಯೇ ಅವರ ಪ್ರತಿಭೆಗೆ ಜಾಗತಿಕ ಮಟ್ಟದ ಅವಕಾಶಗಳು, ಬೆಂಬಲ ಎಲ್ಲವೂ ದೊರೆಯಿತು. ಸಮಾನ ಮಟ್ಟದ ಪ್ರತಿಭೆಗಳೆಂದು ನಾನು ಹೇಳುತ್ತಿಲ್ಲ. ಬದುಕೇ ಕಷ್ಟವಾದ ಪ್ರತಿಭಾವಂತರ ಬಗ್ಗೆ ಆಗುವ ದುಃಖವನ್ನು ಮಾತ್ರ ಹಂಚಿಕೊಳ್ಳುತ್ತಿದ್ದೇನೆ.

ನಾಲ್ಕನೆಯ ಘಟ್ಟ, ಅದರೆಲ್ಲ ಅರ್ಥದಲ್ಲಿ ಹೊಸ ದಿಕ್ಕಿನ ಪ್ರಯಾಣದ ಏಳು ಬೀಳುಗಳ ಕಥನ. ಹೆಣ್ಣು ಮನೋವಿನ್ಯಾಸವನ್ನು ಬದಲಿಸಿಕೊಳ್ಳುವಲ್ಲಿ ಹಂತ ಹಂತವಾಗಿ ಯಶಸ್ವಿಯಾಗುತ್ತಿರುವ ಪಲ್ಲಟಗಳ ಬರಹಗಳು ನಮಗೆ ಸಿಕ್ಕುತ್ತಿರುವ ಕಾಲ ಇದು. ಪ್ರೇಮಾ ಕಾರಂತರ 'ಸೋಲಿಸಬೇಡ ಗೆಲಿಸಯ್ಯ' ಇದರ ಉದ್ಘಾಟನಾ ಕೃತಿ ಎನ್ನಬಹುದು. ಸ್ವಮರುಕವನ್ನು ಸಂಪೂರ್ಣವಾಗಿ ಗೆದ್ದ, ಬದುಕಿನಲ್ಲಿ ಮಾಡಿಕೊಂಡ ರಾಜಿಗಳನ್ನೋ ತನ್ನದೇ ದೌರ್ಬಲ್ಯಗಳನ್ನೋ ಆಮಿಷಗಳನ್ನೋ ಹೇಳಲು ಬಯಸದ ಈ ಪಥ್ಯದಲ್ಲಿ ಪ್ರೇಮಾ ಅವರು ಹೆಣ್ಣಿಗಾಗಿಯೇ ಎಂದು ನಿರ್ಧರಿಸಿದ ದಾರಿಗಳನ್ನು ಮಂಡಿಸುವ ದಿಟ್ಟತನದ ಬಗೆಯೇ ನಮ್ಮ ಗಮನ ಸೆಳೆಯುತ್ತದೆ. ಮದುವೆಯಿರಬಹುದು, ರಂಗಭೂಮಿಯಿರಬಹುದು, ಸಿನಿಮಾ, ಸಾಮಾಜಿಕ ರಾಜಕೀಯ ಒಡನಾಟಗಳು ಈ ಯಾವುದರಲ್ಲಿಯೂ ಸಂಕೋಚವಿಲ್ಲದೆ ಮುನ್ನುಗ್ಗುತ್ತಾರೆ. ಒಳಗೆ ನಮ್ಮನ್ನು ಕಾಡುವ ಅಳುಕುಗಳಿಂದ ಇವರು ಪೂರ್ಣವಾಗಿ ಮುಕ್ತರಾಗಿರುವುದೇ ಇವರಲ್ಲಿದ್ದ 'ಹೊಸ ಹೆಣ್ಣ'ನ್ನು ನಮ್ಮೆದುರಿಗೆ ತರುತ್ತದೆ. ಭಾರ್ಗವಿ ನಾರಾಯಣ್ ಅವರ 'ನಾನು ಭಾರ್ಗವಿ', ಪ್ರತಿಭಾ ನಂದಕುಮಾರ್ ಅವರ 'ಅನುದಿನದ ಅಂತರಗಂಗೆ', ಉಮಾಶ್ರೀ ಅವರ 'ಬೆಂಕಿ ಬೆಡಗು', ಇಂದಿರಾ ಲಂಕೇಶ್ ಅವರ 'ಹುಳಿಮಾವು ಮತ್ತು ನಾನು', ವಿಜಯಮ್ಮ ಅವರ 'ಕುದಿ ಎಸರು', ಬಿ. ಜಯಶ್ರೀ ಅವರ 'ಕಣ್ಣಾಮುಚ್ಚೆ ಕಾಡೇಗೂಡೆ' ಗಮನಿಸಬೇಕಾದ ಆತ್ಮಕಥನಗಳು. ಪ್ರತಿಭಾ ಅವರ ಆತ್ಮಕಥನವು ಇವುಗಳಲ್ಲೆಲ್ಲ ಮಹತ್ವದ್ದು ಎನ್ನುವುದಕ್ಕೆ ಕಾರಣಗಳಿವೆ. ಸೋಲೋ ಗೆಲುವೋ, ಸರಿಯೋ ತಪ್ಪೋ ನಾನು ಬಯಸಿದ, ಹುಡುಕಿದ ಬದುಕನ್ನು ನಾನು ಬದುಕುತ್ತಿದ್ದೇನೆ ಎನ್ನುವ ಆತ್ಮಧರ್ತಿ ಇದಕ್ಕೆ ಅಸಾಧಾರಣವಾದ ಶಕ್ತಿಯನ್ನು ಕೊಟ್ಟಿದೆ. ಈ ತನಕದ, ಅಂದರೆ ಮೊದಲ ಮೂರೂ ಘಟ್ಟಗಳ ಆತ್ಮಕಥನಗಳಲ್ಲಿ ಅವು ಹೆಣ್ಣಿನ ಆತ್ಮಕಥನಗಳಾಗಿದ್ದರೂ ಗಂಡಿನ ಕಣ್ಣನ್ನು ಎದುರಿಗಿಟ್ಟುಕೊಂಡೇ ಬರೆದವಾಗಿದ್ದವು. ಆದರೆ, ಈ ಘಟ್ಟದ ನಿರೂಪಣೆಗಳು ತಮ್ಮೆದುರಿಗೆ ತಮ್ಮನ್ನೇ ಇರಿಸಿಕೊಂಡಿವೆ. ಗಂಡು, ಲೋಕ ಆಮೇಲಿನದು. ಮೊದಲಿಗೆ ಈ ನನ್ನ ಬದುಕನ್ನು ನಾನು ಬದುಕಿದ ಬಗೆಯನ್ನು ತಾವೇ ಹಿನ್ನೋಟದಲ್ಲಿ ನೋಡಲು ಹೊರಡುವುದೇ ಈ ಆತ್ಮಕಥನಗಳ ವಿಶೇಷ ಶಕ್ತಿ. ನನ್ನ ಕಣ್ಣಿನಲ್ಲಿ ನಾನು ಮಾಡಿದ್ದು ಸರಿ ಎಂದಾದ ಮೇಲೆ ಲೋಕದ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ ಎನ್ನುವ ನಂಬಿಕೆಯಲ್ಲಿ ಬರೆದವು. ಎದುರಿನವರು ನನಗೆ ನೊ ಆಬ್ಜೆಕ್ಷನ್ ಸರ್ಟಿಫಿಕೇಟ್ ಕೊಡಲಿ ಎಂದು ಆಶಿಸುವ ಮನಃಸ್ಥಿತಿಯಿಂದ ಹೊರಬಂದವು. ಪ್ರತಿಭಾ ಅವರ ಕೃತಿ ಇದರ ಶಿಖರ. ಇದನ್ನು ಅವರು ರೋಚಕತೆಗಾಗಿ, ಪ್ರಯೋಗಕ್ಕಾಗಿ ಅವರೇ ಹೇಳಿದಂತೆ ಆ ಪತ್ರಿಕೆಯ ಪ್ರಸಾರ ಹೆಚ್ಚಿಸಲು ಬರೆದರೂ, ಅವೆಲ್ಲ ಎರಡನೆಯದಾಗಿ ಆ ಕೃತಿಯಲ್ಲಿ ಸಾಧಿತವಾಗಿರುವ ಹೆಣ್ಣಿನ ದೃಷ್ಟಿಕೋನ ಮತ್ತು ಮನೋಶಕ್ತಿಯ ಕಾರಣಕ್ಕಾಗಿ ಅದು ಹೆಣ್ಣಿನ ಆತ್ಮಕಥನಗಳಲ್ಲೇ ಮೈಲಿಗಲ್ಲಾಗಿ ನಿಲ್ಲುತ್ತದೆ. ಇಂದಿರಾ ಅವರ ಆತ್ಮಕಥನವು ಹೆಣ್ಣಿನ 'ಸ್ವರಚನೆ'ಯ ಯಶೋಗಾಥೆಯಾಗುತ್ತಲೇ ಅವಳ ಆತ್ಮಘನತೆಯನ್ನು ಅವಳೇ ಸಂಪಾದಿಸಿಕೊಳ್ಳುವ, ಆ ಕಾರಣಕ್ಕಾಗಿ ತಾನು ತನ್ನನ್ನು ನೋಡುವ ಮತ್ತು ಲೋಕ ತನ್ನನ್ನು ನೋಡಬೇಕಾದ ನೋಟವನ್ನೂ ಸೃಷ್ಟಿಸುವ